ಎಂ ವಿ ಸಿ ನಂ: 289/2025
ಆರ್ ಡಬ್ಲ್ಯೂ: 1

<u>ದಿನಾಂಕ:21-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಖ್ಯವಿಚಾರಣೆ: 3 ನೇ ಎದುರುದಾರರ ಪರ Sri. C.O.Y.ವಕೀಲರ ಪರವಾಗಿ ಶ್ರೀ S.P. ವಕೀಲರಿಂದ:</u>

ನಾನು ಈ ಕೇಸಿನಲ್ಲಿ 3 ನೇ ಎದುರುದಾರರ ವಿಮಾ ಕಂಪನಿಯಲ್ಲಿ ಲೀಗಲ್ ರಿಟೇನರ್ ಅಂತ ಕೆಲಸ ಮಾಡುತ್ತಿದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

1. ನಾನು ಈ ದಿನ ನಮ್ಮ ವಿಮಾ ಕಂಪನಿಯವರು ನೀಡಿದ Authorization ಪ್ರತಿ ಹಾಜರುಪಡಿಸುತ್ತಿದ್ದು ನಿಶಾನೆ ಆರ್- 1. ವಿಮಾ ಪಾಲಿಸಿಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ.

: <u>ಪಾಟೀ ಸವಾಲು ಅರ್ಜಿದಾರರ ಪರ Sri. N.V.S. ವಕೀಲರಿಂದ</u> :

1. ಈ ಅಪಘಾತ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಮ್ಮ ವಿಮಾ ಕಂಪನಿಯಿಂದ ಆಂತರಿಕ ತನಿಖೆಯನ್ನು ಮಾಡಿಸಿ ಯಾವುದೇ ವರದಿಯನ್ನು ಪಡೆದುಕೊಂಡಿರುವುದಿಲ್ಲ. ಎನ್.ಆರ್.ಪುರ ಪೋಲಿಸ್ ಠಾಣೆಯವರು 1 ನೇ ಎದುರುದಾರರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಅಪಘಾತಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದೋಷಾರೋಪಣಾ ಪಟ್ಟಿಯಲ್ಲಿ 1 ನೇ ಎದುರುದಾರ ಅತೀ ವೇಗ ಮತ್ತು ಅಜಾಗರೂಕತೆಯಿಂದ ಅಪಘಾತ ಆಗಿರುತ್ತದೆ ಎಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ವಿರುದ್ಧ ಸಲ್ಲಿಸಿದ ಅಂತಿಮ ವರದಿಯನ್ನು ನಾವು ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇವೆ. ನಾವು ಅಂತಿಮ ವರದಿಯನ್ನು ಪ್ರಶ್ನಿಸಿ ನಾವಾಗಲಿ ಅಥವಾ 1 ನೇ ಎದುರುದಾರರು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ.

2. 2 ನೇ ಎದುರುದಾರರ ವಾಹನಕ್ಕೆ ನಮ್ಮ ವಿಮಾ ಕಂಪನಿ ನೀಡಿದ ವಿಮಾ ಪಾಲಿಸಿ ಅಪಘಾತ ಆಗುವ ಕಾಲಕ್ಕೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. 1 ನೇ ಎದುರುದಾರರು ಪೋಲಿಸರು ಸಲ್ಲಿಸಿದ ಅಂತಿಮ ವರದಿಯನ್ನು ಒಪ್ಪಿಕೊಂಡು ನ್ಯಾಯಾಲಯಕ್ಕೆ ದಂಡ ಪಾವತಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಅರ್ಜಿದಾರರ ವಯಸ್ಸು, ಅವರು ಏನು ಕೆಲಸ ಮಾಡುತ್ತಾರೆ ಮತ್ತು ಅವರಿಗೆ ಎಷ್ಟು ಆದಾಯ ಇರುತ್ತದೆ ಎಂಬ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ. 1 ನೇ ಎದುರುದಾರರ ತಪ್ಪಿನಿಂದ ಅಪಘಾತ ಆಗಿದ್ದು, ಆ ಕಾಲಕ್ಕೆ 2 ನೇ

ಎದುರುದಾರರ ವಾಹನಕ್ಕೆ ನಮ್ಮ ವಿಮಾ ಕಂಪನಿ ನೀಡಿದ ವಿಮೆ ಚಾಲ್ತಿಯಲ್ಲಿದ್ದ ಕಾರಣ ನಮ್ಮ ವಿಮಾ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರು ಇರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮೇಲಿನ ಬಾಧ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿ ಃ